# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ ಜಿಲ್ಲಾ / ತಾಲ್ಲೂಕು ಪಂಚಾಯತಿಗಳ ನಿಧಿ–1 ಮತ್ತು ನಿಧಿ–3ರಡಿ ಲಭ್ಯವಿರುವ ಅನುದಾನಗಳನ್ನು ಮರು ಮೌಲ್ಯೀಕರಿಸುವ ಬಗ್ಗೆ

**ಓದಲಾಗಿದೆ:**

1. **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ–2ರವರ ಅಧ್ಯಕ್ಷತೆಯಲ್ಲಿ ದಿನಾಂಕ: 04.12.2019ರಂದು ನಡೆದ ಸಭೆಯ ನಿರ್ಣಯಗಳು.**
2. **ಸರ್ಕಾರದ ಆದೇಶ ಸಂಖ್ಯೆ: ಆಇ 437 ವೆಚ್ಚ–6 2016, ದಿನಾಂಕ: 22.12.2016.**

**ಪ್ರಸ್ತಾವನೆ:**

ರಾಜ್ಯದ ಜಿಲ್ಲಾ / ತಾಲ್ಲೂಕು ಪಂಚಾಯತಿಗಳಲ್ಲಿ ಲೆಕ್ಕ ಪತ್ರಗಳನ್ನು ನಿಧಿ ವ್ಯವಹಾರದಡಿ ನಿರ್ವಹಿಸುತ್ತಿದ್ದು, ನಿಧಿ–1, 2 ಮತ್ತು 3 ಎಂದು ವರ್ಗೀಕರಿಸಲಾಗಿದೆ. ಸದರಿ ನಿಧಿಗಳಡಿಯ ಲೆಕ್ಕಪತ್ರಗಳಡಿ ಸ್ವೀಕೃತವಾಗುವ ಅನುದಾನ / ರಾಜಸ್ವವನ್ನು ಕೆಳಕಂಡಂತೆ ನಿರ್ವಹಿಸುವ ಬಗ್ಗೆ 2004ರಲ್ಲಿ ಆದೇಶವನ್ನು ಹೊರಡಿಸಿದ್ದು ಇದಕ್ಕೆ ಸಂಬಂಧಿಸಿದಂತೆ ಆಗಿಂದಾಗ್ಯೆ ಮಾರ್ಪಾಡುಗಳನ್ನು ಮಾಡಲಾಗಿರುತ್ತದೆ.

| | | |
|---|---|---|
| ನಿಧಿ–1 | : | ಕೇಂದ್ರ ಯೋಜನೆ / ಕೇಂದ್ರ ಪುರಸ್ಕೃತ ಯೋಜನೆಯಡಿ ಸ್ವೀಕೃತವಾಗುವ ಅನುದಾನಗಳಾಗಿತ್ತದೆ. ಈ ನಿಧಿಯಡಿ ಸ್ವೀಕೃತವಾಗುವ ಅನುದಾನಗಳನ್ನು ಆರ್ಥಿಕ ವರ್ಷಾಂತ್ಯದಲ್ಲಿ ವ್ಯಪಗತವಾಗದೆ ಮುಂದಿನ ಆರ್ಥಿಕ ವರ್ಷಕ್ಕೆ ಲಭ್ಯಪಡಿಸಿ, ಮುಂದಿನ ವರ್ಷದಲ್ಲಿ ಕ್ರಿಯಾ ಯೋಜನೆಗಳನ್ನು ರೂಪಿಸಿಕೊಂಡು ಕ್ಲುಪ್ತ ವೇಳೆಯೊಳಗೆ ಕೇಂದ್ರ ಯೋಜನೆಯ ವೆಚ್ಚದ ಮಾರ್ಗಸೂಚಿಗಳನ್ವಯ ವೆಚ್ಚ ಮಾಡಬೇಕಾಗುತ್ತದೆ. |
| ನಿಧಿ–2 | : | ರಾಜ್ಯದ ಸಂಚಿತ ನಿಧಿಯಡಿ ಸ್ವೀಕೃತವಾಗುವ ಅನುದಾನಗಳಾಗಿರುತ್ತದೆ. ಈ ಉಭಯ ಸದನಗಳಲ್ಲಿ ಅನುಮೋದನೆಗೊಂಡಂತೆ ಆಯಾಯ ವರ್ಷದಲ್ಲಿಯೇ ಕ್ರಿಯಾ ಯೋಜನೆಗಳನ್ನು ರೂಪಿಸಿಕೊಂಡು ವೆಚ್ಚ ಮಾಡಬೇಕಾಗುತ್ತದೆ. ಒಂದು ವೇಳೆ ಆರ್ಥಿಕ ವರ್ಷದೊಳಗೆ ವೆಚ್ಚ ಮಾಡಲಾಗದ ಅನುದಾನಗಳು ಮುಂದಿನ ಆರ್ಥಿಕ ವರ್ಷಕ್ಕೆ ಮುಂದುವರೆಸದೆ ವ್ಯಪಗತವಾಗುತ್ತದೆ. ಏಕೆಂದರೆ, ಮುಂದಿನ ಆರ್ಥಿಕ ವರ್ಷಕ್ಕೆ ಮರು ಆಯವ್ಯಯ ಸಾಧನಗಳ ಅನುಮೋದನೆ ಪಡೆಯಲಾಗಿದ್ದು, ಎಲ್ಲಾ ಜಿಲ್ಲಾ ವಲಯದ ಸಂಸ್ಥೆಗಳಿಗೆ ಅನುದಾನ ಹೊಸದಾಗಿ ನೀಡಲಾಗಿರುತ್ತದೆ. |
| ನಿಧಿ–3 | : | ಜಿಲ್ಲಾ / ತಾಲ್ಲೂಕು ಪಂಚಾಯತಿಗಳ ಸ್ವಂತ ಸ್ವೀಕೃತಿಗಳು: ಅಂದರೆ ಜಿಲ್ಲಾ / ತಾಲ್ಲೂಕು ಪಂಚಾಯತಿಗಳ ವ್ಯಾಪ್ತಿಯೊಳಗೆ ಸ್ವತ್ತುಗಳ ನೋಂದಣಿಯಿಂದ ಸ್ವೀಕೃತವಾಗುವ ಮುದ್ರಾಂಕ ಶುಲ್ಕವನ್ನು ಸಂಬಂಧಿಸಿದ ಜಿಲ್ಲಾ / ತಾಲ್ಲೂಕು ಪಂಚಾಯತಿಗಳಿಗೆ ಹಂಚಿಕೆ ಮಾಡಲಾಗುತ್ತದೆ, ಜಿಲ್ಲಾ / ತಾಲ್ಲೂಕು ಪಂಚಾಯತಿಗಳು ಸ್ವಂತ ಸ್ವತ್ತುಗಳಿಂದ ಸಂಗ್ರಹಿಸುವ ಬಾಡಿಗೆ, ಶುಲ್ಕ, ತೆರಿಗೆ, ಇ.ಎಂ.ಡಿ. ಮತ್ತಿತರೆ ರಾಜಸ್ವಗಳನ್ನು ಈ ನಿಧಿಯಡಿ ನಿರ್ವಹಿಸಲಾಗುತ್ತದೆ. ಇದು ವರ್ಷಾಂತ್ಯದಲ್ಲಿ ವ್ಯಪಗತವಾಗುವುದಿಲ್ಲ. |

ಮೇಲಿನ ವರ್ಗೀಕರಣದನ್ವಯ ನಿಧಿಯಡಿ ನಿರ್ವಹಿಸುವ ಲೆಕ್ಕಪತ್ರಗಳನ್ನು ಪ್ರತಿ ಜಿಲ್ಲಾ / ತಾಲ್ಲೂಕು ಪಂಚಾಯತಿಗಳು ಸಂಬಂಧಿಸಿದ ಖಜಾನೆಗಳ ಮೂಲಕ ಹಾಗೂ ಮಹಾಲೇಖಪಾಲರ ಲೆಕ್ಕ ಪತ್ರಗಳೊಂದಿಗೆ ತಾಳೆಗೊಳಿಸಿಕೊಳ್ಳಬೇಕಾಗುತ್ತದೆ.

ಆದರೆ ರಾಜ್ಯದ ಬಹುತೇಕ ಜಿಲ್ಲಾ / ತಾಲ್ಲೂಕು ಪಂಚಾಯಿತಿಗಳು ತಮ್ಮ ನಿಧಿ–1 ಮತ್ತು ನಿಧಿ–3ರಡಿ ಸ್ವೀಕೃತಗೊಂಡು ಆರ್ಥಿಕ ವರ್ಷದ ಕೊನೆಯಲ್ಲಿ ವೆಚ್ಚವಾಗದ ಅನುದಾನಗಳನ್ನು ಲೆಕ್ಕ ಸಮನ್ವಯಗೊಳಿಸಿಕೊಳ್ಳದಿರುವುದರಿಂದ ಮಹಾಲೇಖಪಾಲರ ಲೆಕ್ಕ ಪತ್ರಗಳಲ್ಲಿ ವೆಚ್ಚವಾಗದ ಅನುದಾನಗಳ ನಿರ್ವಹಣೆಯ ಬಗ್ಗೆ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

ಜಿಲ್ಲಾ / ತಾಲ್ಲೂಕು ಪಂಚಾಯತಿಗಳ ಲೆಕ್ಕಪತ್ರಗಳನ್ನು ಪೂರ್ಣವಾಗಿ ಖಜಾನೆ–2ರಡಿ ನಿರ್ವಹಿಸಲು ಕ್ರಮವಹಿಸಲಾಗಿರುವುದರಿಂದ ಈ ಹಿಂದೆ ನಿಧಿ–1 ಮತ್ತು ನಿಧಿ–3ರಡಿ ಲಭ್ಯವಿರುವ ಅನುದಾನವನ್ನು ಲಭ್ಯಪಡಿಸಿರದ ಕಾರಣ ವೇತನ / ಕಾರ್ಯಕ್ರಮಗಳ ಅನುಷ್ಠಾನಕ್ಕೆ ತೊಂದರೆಯಾಗಿರುವುದಾಗಿ ಪ್ರಸ್ತಾವನೆಗಳನ್ನು ಸಲ್ಲಿಸಿದ್ದರ ಹಿನ್ನೆಲೆಯಲ್ಲಿ, ಪ್ರಸ್ತುತ ಅಂದರೆ 2018–19ನೇ ಸಾಲಿನಲ್ಲಿ ನಿಧಿ–1 ಮತ್ತು ನಿಧಿ–3ರಡಿ ಸ್ವೀಕೃತಗೊಂಡು ವರ್ಷಾಂತ್ಯದಲ್ಲಿ ವೆಚ್ಚವಾಗದ ಅನುದಾನಗಳನ್ನು ಸಂಬಂಧಿಸಿದ ಖಜಾನೆಗಳ ಲೆಕ್ಕಪತ್ರಗಳೊಂದಿಗೆ ಸಮನ್ವಯೀಕರಿಸಿಕೊಂಡ ನಂತರ ಖಜಾನೆ–2ರಡಿ ಲಭ್ಯಪಡಿಸಲಾಗಿರುತ್ತದೆ.

ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ನಿಧಿ–1 ಮತ್ತು ನಿಧಿ–3ರಡಿ ಲಭ್ಯವಿರುವ ಅನುದಾನಗಳನ್ನು ವೆಚ್ಚ ಭರಿಸುವ ಸಂಬಂಧ ಕ್ರಿಯಾ ಯೋಜನೆಗಳನ್ನು ತಯಾರಿಸಿ ಸಂಬಂಧಿಸಿದ ಸಮಿತಿಗಳಿಂದ ಅನುಮೋದನೆಯನ್ನು ಪಡೆದು ವೆಚ್ಚ ಭರಿಸುವ ಸಂಬಂಧ ಅನೇಕ ಕಾರ್ಯಕ್ರಮಗಳು ಪ್ರಗತಿಯಲ್ಲಿದ್ದು ಪೂರ್ಣಗೊಂಡ ಕಾರ್ಯಕ್ರಮಗಳಿಗೆ ವೆಚ್ಚವನ್ನು ಪಾವತಿಸಬೇಕಾಗಿರುವುದರಿಂದ ಲಭ್ಯವಿರುವ ಅನುದಾನವನ್ನು ಮರು ಮೌಲ್ಯೀಕರಿಸಿಕೊಡಲು ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಕ್ಲುಪ್ತ ವೇಳೆಯಲ್ಲಿ ಜಿಲ್ಲಾ / ತಾಲ್ಲೂಕು ಪಂಚಾಯತಿಗಳು ಲೆಕ್ಕಪತ್ರಗಳನ್ನು ಸಮನ್ವಯೀಕರಿಕೊಳ್ಳದ್ದರಿಂದ ಖಜಾನೆ–2ರ ಅಂಕಿ ಅಂಶಗಳಲ್ಲಿ ಅನುದಾನಗಳನ್ನು ಮುಂದುವರೆಸುವ ಸಂಬಂಧ ಗೊಂದಲಗಳಿದ್ದು ನಿಕಟ ಪೂರ್ವ ಆರ್ಥಿಕ ವರ್ಷವಾದ 2018–19ರಲ್ಲಿ ವೆಚ್ಚವಾಗದ ಅನುದಾನವನ್ನು ಮಾತ್ರ 2019–20ನೇ ಸಾಲಿಗೆ ಲಭ್ಯಪಡಿಸಲಾಗಿರುತ್ತದೆ.

ರಾಜ್ಯದ ಜಿಲ್ಲಾ/ ತಾಲ್ಲೂಕು ಪಂಚಾಯತಿಗಳು ಅನೇಕ ವರ್ಷಗಳಿಂದ ನಿಧಿ–1 ಮತ್ತು ನಿಧಿ–3ರಡಿ ಲಭ್ಯವಿರುವ ಅನುದಾನಗಳನ್ನು ಪೂರ್ಣಗೊಂಡ ಕಾರ್ಯಗಳ / ಯೋಜನೆಯ ಅನುಷ್ಠಾನಗೊಂಡ ಕಾರ್ಯಕ್ರಮಗಳಿಗೆ ಪಾವತಿಸಬೇಕಾಗಿರುವುದರಿಂದ ಮರು ಮೌಲ್ಯೀಕರಿಸಿ ಕೊಡುವಂತೆ ಪ್ರಸ್ತಾವಿಸಿರುವುದನ್ನು ಪರಿಗಣಿಸಿ ಉಲ್ಲೇಖದಲ್ಲಿ ನಮೂದಿಸಿರುವ ಸಭೆಯಲ್ಲಿ ಆರ್ಥಿಕ ಇಲಾಖೆ,

ಮಹಾಲೇಖಪಾಲರು ಮತ್ತು ಖಜಾನೆ–2 ಅಧಿಕಾರಿಗಳೊಂದಿಗೆ ಚರ್ಚಿಸಿ ಅನೇಕ ವರ್ಷಗಳಿಂದ ಜಿಲ್ಲಾ / ತಾಲ್ಲೂಕು ಪಂಚಾಯತಿಗಳ ನಿಧಿ–1 ಮತ್ತು ನಿಧಿ–3ರಡಿ ಲಭ್ಯವಿರುವ ಅನುದಾನದಲ್ಲಿ 5 ವರ್ಷಗಳಿಂದೀಚೆಗಿನ ಅಂದರೆ 2014–15 ರಿಂದ 2017–18ರವರೆಗೆ ಬಿಡುಗಡೆ / ಸಂಗ್ರಹವಾದ ಅಯಾಯ ವರ್ಷಗಳಲ್ಲಿ ವೆಚ್ಚವಾದ ಹಾಗೂ ವೆಚ್ಚವಾಗದ ಅನುದಾನವನ್ನು ಮಾತ್ರ ಲೆಕ್ಕಪತ್ರಗಳನ್ನು ಜಿಲ್ಲಾ / ತಾಲ್ಲೂಕು ಪಂಚಾಯತಿಗಳು ಸಂಬಂಧಿಸಿದ ಖಜಾನೆಗಳೊಂದಿಗೆ ಸಮನ್ವಯೀಕರಿಸಿಕೊಂಡು ಸಲ್ಲಿಸುವ ಲೆಕ್ಕ ಪತ್ರಗಳ ಆಧಾರದ ಮೇಲೆ ಹಾಗೂ ಮಹಾಲೇಖಪಾಲರು ನಿರ್ವಹಿಸುತ್ತಿರುವ ಲೆಕ್ಕ ಪತ್ರಗಳ ಆಧಾರದ ಮೇಲೆ ಯಾವುದು ಕಡಿಮೆ ಅನುದಾನ ಲಭ್ಯವಿರುತ್ತದೆಯೋ ಅಂತಹ ಅನುದಾನಗಳನ್ನು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಖಜಾನೆ–2ರಲ್ಲಿ ಲಭ್ಯಪಡಿಸುವಂತೆ ಮತ್ತು 2014–15ರ ಪೂರ್ವದಲ್ಲಿದ್ದ ಅನುದಾನಗಳನ್ನು ಮಹಾಲೇಖಪಾಲರು ತಮ್ಮ ಲೆಕ್ಕಪತ್ರಗಳಲ್ಲಿ Suspense ಶೀರ್ಷಿಕೆಯಲ್ಲಿಡಲು ಕೋರಬಹುದೆಂದು ನಿರ್ಣಯಿಸಲಾದ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 405 ವೆಚ್ಚ–6/2019 ದಿನಾಂಕ: 10ನೇ ಜನವರಿ 2020

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವಂತೆ ರಾಜ್ಯದ ಜಿಲ್ಲಾ / ತಾಲ್ಲೂಕು ಪಂಚಾಯತಿಗಳಲ್ಲಿ ಲೆಕ್ಕ ಪತ್ರಗಳನ್ನು ನಿಧಿ–1, 2 ಮತ್ತು 3ರಲ್ಲಿ ನಿರ್ವಹಿಸುತ್ತಿದ್ದು, ಸದರಿ ನಿಧಿಗಳಡಿಯ ಲೆಕ್ಕಪತ್ರಗಳಡಿ ಸ್ವೀಕೃತವಾಗುವ ಅನುದಾನ / ರಾಜಸ್ವವನ್ನು ಕೆಳಕಂಡಂತೆ ನಿರ್ವಹಿಸುವ ಬಗ್ಗೆ, ಉಲ್ಲೇಖ(2)ರಲ್ಲಿ ಹೊರಡಿಸಲಾಗಿರುವ ಆದೇಶಗಳಲ್ಲಿನ ಸೂಚನೆಗಳನ್ನು ಮುಂದುವರೆಸುತ್ತಾ, ಈ ಕೆಳಕಂಡ ಸೂಚನೆಗಳನ್ನು ಸೇರ್ಪಡೆಗೊಳಿಸಲಾಗಿದೆ.:

ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ನಿಧಿ–2ರಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು ಈಗಾಗಲೇ ಆದೇಶ ಸಂಖ್ಯೆ: ಆಇ 437 ವೆಚ್ಚ–6 2016, ದಿನಾಂಕ: 22.12.2016ರಲ್ಲಿ ನೀಡಲಾಗಿದ್ದು, ಅವುಗಳೇ ಮುಂದುವರೆಯುತ್ತವೆ.

**ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ನಿಧಿ–1 ಮತ್ತು 3 ರಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು**

1. ಈ ರೀತಿ ಖಜಾನೆಯಲ್ಲಿ ಜಿಲ್ಲಾ/ ತಾಲ್ಲೂಕು ಪಂಚಾಯತಿಗಳ ನಿಧಿ–1 ಮತ್ತು 3ರಡಿ ಲಭ್ಯವಿರುವ ಅನುದಾನವನ್ನು ಮರು ಲಭ್ಯಪಡಿಸಿಕೊಳ್ಳಲು ದಿನಾಂಕ:29.2.2020ರಂದು ಕೊನೆಯ ದಿನವಾಗಿರತಕ್ಕದ್ದು, ಯಾವುದೇ ಕಾರಣಕ್ಕೂ ಅಂತಿಮ ದಿನಾಂಕದ ನಂತರ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಭಾವಿಸತಕ್ಕದ್ದು.

2. ರಾಜ್ಯದ ಜಿಲ್ಲಾ / ತಾಲ್ಲೂಕು ಪಂಚಾಯತಿಗಳಿಂದ 2014–15ರಿಂದ 2017–18ರವರೆಗೆ ವೆಚ್ಚವಾಗಿರುವ ಮತ್ತು ವೆಚ್ಚವಾಗದ ಅಂಕಿ ಅಂಶಗಳನ್ನು ಮಹಾಲೇಖಪಾಲರು ನೀಡುವ ಅಂಕಿ ಅಂಶಗಳೊಂದಿಗೆ ಸಮನ್ವಯೀಕರಿಸಿ ನಿಷ್ಠ ಶಿಲ್ಕನ್ನು (Minimum Balance) ಖಜಾನೆ–2ರಡಿ ಲಭ್ಯಪಡಿಸಿ ಆರ್ಥಿಕ ಇಲಾಖೆ ಮತ್ತು ಮಹಾಲೇಖಪಾಲರಿಗೆ ವರದಿಯನ್ನು ಸಲ್ಲಿಸುವುದು.

3. ದಿನಾಂಕ: 31.3.2014ರಲ್ಲಿದ್ದ ಅನುದಾನಗಳನ್ನು ಮಹಾಲೇಖಪಾಲರು ತಮ್ಮ ಲೆಕ್ಕ ಪತ್ರಗಳಲ್ಲಿ Suspense Account ಇರಿಸಲು ಕೋರುವುದು ಹಾಗೂ ಆ ಅಂಕಿ ಅಂಶಗಳನ್ನು ಆರ್ಥಿಕ ಇಲಾಖೆ ಪಡೆಯತಕ್ಕದ್ದು.

4 2014–15 ರಿಂದ 2018–19ರ ಶಿಲ್ಕು ಖಜಾನೆ–2ರಲ್ಲಿ ಅಳವಡಿಸಲು ಸೂಚಿಸಿರುವ ಪ್ರಕ್ರಿಯೆ ಕೆಳಕಂಡಂತೆ ಇರುತ್ತದೆ:

ಅ) ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿ (ಸಮಯ ಮಿತಿ - ದಿನಾಂಕ: 30.01.2020ರೊಳಗೆ)

- ನಿಧಿ–1 ಮತ್ತು 3ರ ಸ್ವೀಕೃತಿಗಳು ಮತ್ತು ಪಾವತಿಗಳಿಗನುಸಾರವಾಗಿ ಖಜಾನೆಯು ಪ್ರತಿ ತಿಂಗಳು ಸಲ್ಲಿಸುವ ಲೆಕ್ಕಪತ್ರಗಳನ್ನು ಆಧರಿಸಿ ಪ್ರತಿ ವರ್ಷಕ್ಕೆ 2014–15 ರಿಂದ 2018–19 ರವರೆಗೆ ತಃಖ್ತೆಯನ್ನು ಸಿದ್ಧಪಡಿಸುವುದು. ತಃಖ್ತೆಯಲ್ಲಿ ವರ್ಷವಾರು ತಿಂಗಳಲ್ಲಿ ಯಾವ ದಿನಾಂಕದಂದು ಜಮೆಯಾಯಿತು; ಮೊತ್ತ ಹಾಗೂ ಯಾವ ದಿನಾಂಕದಂದು ಎಷ್ಟು ವೆಚ್ಚ ಮಾಡಲಾಯಿತು. ಈ ಮಾಹಿತಿ ನೀಡುವುದು.
- ಇದರೊಂದಿಗೆ ಈ ಕೆಳಕಂಡ ನಮೂನೆಯಲ್ಲಿ ಘೋಷ್ವಾರೆಯನ್ನು ಸಿದ್ಧಪಡಿಸುವುದು.

| Year | OB | Fund 1 / 3 | | ZP / TP Name: |
|---|---|---|---|---|
| | | Receipts | Expenditure | Balance |
| 2014-15 | | | | |
| 2015-16 | | | | |
| 2017-18 | | | | |
| 2018-19 | | | | |

- ನಿಧಿ–1ಕ್ಕೆ ಲೆಕ್ಕಶೀರ್ಷಿಕೆವಾರು / ವರ್ಷವಾರು 2014–15ರಿಂದ 2018–19ರವರೆಗೆ ಈ ಕೆಳಕಂಡಂತೆ ತಃಖ್ತೆಯನ್ನು ತಯಾರಿಸುವುದು.

| Consolidated Fund HoA (196/197 minor head) | TTR done Amount Rs. | MPA Scheme code | Expenditure | Balance |
|---|---|---|---|---|
| | | | | |

- * ಮೇಲ್ಕಂಡ ಮೂರು ತಃಖ್ತೆಗಳು ಪ್ರತ್ಯೇಕವಾಗಿ ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಈ ಕೆಳಕಂಡಂತೆ

  "ಮೇಲೆ ನಮೂದಿಸಿರುವ ವಿವರಗಳು ಖಜಾನೆ ಮಾಸಿಕ ಲೆಕ್ಕದೊಡನೆ ಸಮನ್ವಯ ಮಾಡಲಾಗಿದೆ. ಈ ವಿವರಗಳು ನಾನು ಪರಿಶೀಲಿಸಿ, ಸರಿಯಾಗಿದೆ ಎಂದು ಧೃಢಿಕರಿಸಿದೆ".–

  ಎಂದು ಧೃಡೀಕೃತ ಪ್ರಮಾಣ ಪತ್ರವನ್ನು ಹೊಂದಿರಬೇಕು.
- ಸಂಬಂಧಪಟ್ಟ ಖಜಾನೆಗೆ ಸಲ್ಲಿಸಿ ಸಮನ್ವಯಕರಿಸಿಕೊಂಡು ಖಜಾನಾಧಿಕಾರಿಗಳಿಂದ ಧೃಢೀಕರಿಸಲ್ಪಡಬೇಕು.

ಆ) ಖಜಾನಾಧಿಕಾರಿಗಳು ಜಿಲ್ಲಾ ಖಜಾನೆಗಳು (ಜಿಲ್ಲಾ ಪಂಚಾಯತಿಗಳಿಗೆ) ಮತ್ತು ತಾಲ್ಲೂಕು ಖಜಾನೆಗಳು (ತಾಲ್ಲೂಕು ಪಂಚಾಯತಿಗಳಿಗೆ) (ಸಮಯದ ಮಿತಿ – ದಿನಾಂಕ: 06.02.2020ರೊಳಗೆ).

- ಮೇಲೆ ನಮೂದಿಸಿದ ಧೃಢೀಕೃತ ತಃಖ್ತೆಗಳನ್ನು ಮುಖ್ಯ ಲೆಕ್ಕಾಧಿಕಾರಿಗಳು / ಕಾರ್ಯನಿರ್ವಾಹಕಾಧಿಕಾರಿಗಳು ಸ್ವೀಕರಿಸುವುದು.
- ತಮ್ಮ ಲೆಕ್ಕಗಳೊಂದಿಗೆ ತುಲನೇ ಮಾಡುವುದು (K-1ರ ವರದಿಯೊಂದಿಗೆ ತುಲನೇ ಮಾಡುವಂತಿಲ್ಲ). K-1ರ ವರದಿ ಕೇವಲ ಮಾರ್ಗದರ್ಶಕವಾಗಿರಬೇಕು ಹಾಗೂ ಇದು Upper Limit ಎಂದು ಪರಿಗಣಿಸಬೇಕಾಗಿರುತ್ತದೆ.
- ಈ ಮೇಲಿನ ತಃಖ್ತೆಗಳನ್ನು ಪರಿಶೀಲಿಸಿದ ನಂತರ, ಅದೇ ತಃಖ್ತೆಯಲ್ಲಿ ಪರಿಷ್ಕರಣೆ ಮಾಡಬೇಕಾದಲ್ಲಿ, ಮಾಡಿ ಷರಾ ನಮೂದಿಸುವುದು.
- ನಂತರ ಎಲ್ಲಾ ಸರಿಯಿದೆ ಎಂದು ತಿಳಿದ ನಂತರ, ಈ ಕೆಳಕಂಡಂತೆ ಪ್ರತ್ಯೇಕವಾಗಿ ಧೃಢೀಕರಿಸಿ ಸಲ್ಲಿಸುವುದು.

"ಮೇಲಿನ ವಿವರಗಳು ಪರಿಶೀಲಿಸಿದೆ. ಸಮನ್ವಯ ಮಾಡಲಾಗಿದೆ
ಹಾಗೂ ನಮೂದಿಸಿರುವ ಲೆಕ್ಕ ಸರಿಯಿದೆ ಎಂದು ನಂಬಿದ್ದೇನೆ ಎಂದು
ಧೃಢೀಕರಿಸಿದೆ."

ಎಂಬ ತ:ಖ್ತೆಯನ್ನು ಖಜಾನೆ ಲೆಕ್ಕಾಚಾರ ವರದಿಯನ್ವಯ ಪರಿಶೀಲಿಸಿ ಧೃಢೀಕರಿಸುವುದು. ಮತ್ತು ಸರಿಯಾದ ಬಾಕಿ ಎಂದು ಖಜಾನೆ-2 ರಲ್ಲಿ ಪ್ರಾರಂಭಿಕ ಶೇವಣಿ ಎಂದು ಅಳವಡಿಸಲು, ಸದರಿ ತಃಖ್ತೆಗಳನ್ನು ಮಹಾಲೇಖಪಾಲರಿಗೆ, ಆರ್ಥಿಕ ಇಲಾಖೆಗೆ ಮತ್ತು ಖಜಾನೆ ಆಯುಕ್ತರಿಗೆ ಕಳುಹಿಸುವುದು (ಜಿಲ್ಲಾ ಖಜಾನೆಗಳಲ್ಲಿ ತಾಲ್ಲೂಕು ಪಂಚಾಯತಿಗಳಿಂದ ಸ್ವೀಕೃತವಾದ ತ:ಖ್ತೆಗಳನ್ನು ಕ್ರೋಢೀಕರಿಸಿ ಸಲ್ಲಿಸುವುದು).

ಇ) **<u>Treasury Network Management Centre, Bangalore (Time Line -30.01.2020)</u>**

ನಿಧಿ-1 ಮತ್ತು 3ರಲ್ಲಿನ Unspent Balance Statement ನ್ನು ಎಲ್ಲಾಖಜಾನೆಗಳಿಗೆ 2014-15 ರಿಂದ 2018-19ರವರೆಗೆ ಪ್ರತಿ ವರ್ಷಕ್ಕೊಮ್ಮೆ ಖಜಾನೆ-1 ಡಾಟಾ ಬೇಸ್ ಆಧರಿಸಿ ಒದಗಿಸುವುದು. ಇದನ್ನು ಖಜಾನೆಗಳು ಪರಾಮರ್ಶೆಗೆ ಮಾತ್ರ ಉಪಯೋಗಿಸುವುದು, ವಾಸ್ತವಿಕ ಖಜಾನೆ ಲೆಕ್ಕಚಾರಗಳೇ ಪರಾಮರ್ಶೆಗೆ ಪ್ರಾಥಮಿಕ ಮೂಲವಾಗಿರಬೇಕು.

ಈ) <u>ಆರ್ಥಿಕ ಇಲಾಖೆಯಿಂದ ಕ್ರಮ (ಸಮಯದ ಮಿತಿ-12.02.2020)</u>

- ಜಿಲ್ಲಾ ಖಜಾನೆಗಳಿಂದ ಎರಡೂ ಜಿಲ್ಲಾ ಪಂಚಾಯತ್ ಮತ್ತು ತನ್ನ ಅಧೀನದ ಎಲ್ಲಾ ತಾಲ್ಲೂಕು ಪಂಚಾಯತಿಗಳಿಂದ ಸ್ವೀಕೃತಗೊಳ್ಳುವ ತಃಖ್ತೆಯನ್ನು ಮೇಲ್ಕಂಡ ಪ್ರಕ್ರಿಯೆಯಂತೆ ಮಾಡಲಾಗಿದೆಯೇ? ಎಂದು ಪರಿಶೀಲಿಸುವುದು.
- ತದ ನಂತರ ಅದರಂತೆ ಪ್ರತಿ ತಾಲ್ಲೂಕು ಪಂಚಾಯತ್ / ಜಿಲ್ಲಾ ಪಂಚಾಯತ್ ಯಲ್ಲಿನ Balance ಅನ್ನು update ಮಾಡಿಕೊಳ್ಳಲು ಖಜಾನೆ-2 ಗೆ ಅಧಿಕೃತಗೊಳಿಸುವುದು
- ಪ್ರತಿ ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್ ಗಳಲ್ಲಿನ ನಿಧಿ-1 ಮತ್ತು 3ರಲ್ಲಿನ Unspent Balanceನ್ನು (upto 15$^{th}$ March 2020) ಸೆಳೆಯಲು ಅನುಮತಿಸಿರುತ್ತದೆ ಹಾಗೂ ಖರ್ಚು ಮಾಡದೇ ಉಳಿದಿರುವ ಏನಾದರೂ ಬಾಕಿ ಇದ್ದಲ್ಲಿ 2020-21ನೇ ಸಾಲಿಗೆ ಪ್ರಾರಂಭಿಕ ಶುಲ್ಕವಾಗಿ ಪರಿಗಣಿಸಲ್ಪಡುತ್ತದೆ ಮತ್ತು 5ನೇ ಏಪ್ರಿಲ್ 2020ರ ನಂತರ ಸೆಳೆಯಲು ಲಭ್ಯವಾಗುತ್ತದೆ.

ಉ)  **<u>ಖಜಾನೆ–2 ವತಿಯಿಂದ ಕ್ರಮ (ಸಮಯದ ಮಿತಿ–15.02.2020)</u>**

- ಆರ್ಥಿಕ ಇಲಾಖೆಯು ಅಧಿಕೃತಗೊಳಿಸಿರುವ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್‌ಗಳಲ್ಲಿ ಲಭ್ಯವಿರುವ ನಿಧಿ–1 ಮತ್ತು 3ರಲ್ಲಿನ ನಿಗಧಿತ ಸಮಯದ ಮಿತಿಯೊಳಗಿನ unspent Balance ನ್ನು ಅಳವಡಿಸಿಕೊಳ್ಳುವುದು.

ಊ)  **<u>ಆಯುಕ್ತರು, ಖಜಾನೆ ಇಲಾಖೆಯವರಿಂದ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಂದ ಕ್ರಮ (ಸಮಯದ ಮಿತಿ – 20.01.2020)</u>**

- ಈ ಆದೇಶಕ್ಕೆ ಸಂಬಂಧಿಸಿದಂತೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ತಪ್ಪದೇ ಪಾಲಿಸಲು ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಖಜಾನಾಧಿಕಾರಿಗಳಿಗೆ ನಿರ್ದೇಶನಗಳನ್ನು ಹೊರಡಿಸುವುದು.
- ಈ ಬಗ್ಗೆ ಹಿಂಬಾಲನ ಕ್ರಮವಹಿಸುವುದು ಮತ್ತು ಸಮಯದ ಮಿತಿಯೊಳಗೆ ಅನುಸರಿಸಲಾಗಿದೇ ಎಂದು ಖಚಿತಪಡಿಸಿಕೊಳ್ಳುವುದು.
- ಎಲ್ಲಾ ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಪಟ್ಟಂತೆ ಈ ಪ್ರಕ್ರಿಯೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಆಂತರಿಕ ಆರ್ಥಿಕ ಸಲಹೆಗಾರರು ಸೂಚಿಸಿ ಸೂಕ್ತ ಆದೇಶವನ್ನು ಹೊರಡಿಸಲು ಕ್ರಮ ತೆಗೆದುಕೊಳ್ಳುವುದು

ಋ)  **<u>ಮಹಾಲೇಖಪಾಲರ ವತಿಯಿಂದ ಕ್ರಮ</u>**

ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಪುರುಷೋತಮ್ ಸಿಂಗ್ ಬಿ.ಎಚ್)**
ವಿಶೇಷಾಧಿಕಾರಿ(ಜಿ.ಪಂ) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ

**<u>ಪ್ರತಿಯನ್ನು,</u>**

1. ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ–2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು–9
3. ಪ್ರಾಜೆಕ್ಟ್ ಡೈರಕ್ಟರ್, ಖಜಾನೆ–2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು–9
4. ಆಯುಕ್ತರು, ಖಜಾನೆ ಆಯುಕ್ತಾಲಯ, ನೆಲಮಹಡಿ, ವಿಶ್ವೇಶ್ವರಯ್ಯ ಕೇಂದ್ರ, ಡಾ:ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–1
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಇಲಾಖೆ
6. ಎಲ್ಲಾ ಇಲಾಖೆಗಳ ಆಯುಕ್ತರು / ನಿರ್ದೇಶಕರು
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು
8. ರಾಜ್ಯದ ಎಲ್ಲಾ ಜಿಲ್ಲಾ / ಉಪ ಖಜಾನಾಧಿಕಾರಿಗಳು
9. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
10. ಸುತ್ತೋಲೆ ಕಡತಕ್ಕೆ
11. ಹೆಚ್ಚುವರಿ ಪ್ರತಿ